# ಅಕ್ಕ– ಇಷ್ಟಲಿಂಗ

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ 17ನೇ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದ ಥೀಮ್ ಮಹಿಳಾ ಸಬಲೀಕರಣವಾಗಿತ್ತು. ಅದಕ್ಕನುಸರಿಸಿ ಕನ್ನಡದ ಮಹತ್ವದ ಕವಿ ಜಿ.ಎಸ್. ಶಿವರುದ್ರಪ್ಪನವರ ‘ಆಕಾಶದ ನೀಲಿಯಲಿ ಚಂದ್ರ ತಾರೆ ತೊಟ್ಟಿಲಲ್ಲಿ ಬೆಳಕನಿಟ್ಟು ತೂಗಿದಾಕೆ, ನಿನಗೆ ಬೇರೆ ಹೆಸರು ಬೇಕೆ? ಸ್ತ್ರೀ ಎಂದರೆ ಅಷ್ಟೇ ಸಾಕೆ’ ಎಂಬ ಆರ್ದ್ರವೂ ಅರ್ಥಪೂರ್ಣವೂ ಆಗಿರುವ ಕವನದ ‘ಸ್ತ್ರೀ ಅಂದರೆ ಅಷ್ಟೇ ಸಾಕೆ’ ಎಂಬ ಸಾಲೊಂದನ್ನೆ ಟ್ಯಾಗ್‌ಲೈನ್ ಆಗಿ ಬಳಸಲಾಗಿತ್ತು. ಹಿನ್ನೆಲೆಯಲ್ಲಿ ಭಾರತದ ಸಾಧಕಿಯರ ಭಾವಚಿತ್ರಗಳು; ಅನುಕ್ರಮವಾಗಿ ಸಾವಿತ್ರಿಬಾಯಿ ಫುಲೆ, ಅಹಲ್ಯಾಬಾಯಿ ಹೋಳ್ಕರ್, ಇಂದಿರಾ ಗಾಂಧಿ, ಝಾನ್ಸಿರಾಣಿ ಲಕ್ಷ್ಮಿಬಾಯಿ, ಅಕ್ಕಮಹಾದೇವಿ, ಮದರ್ ತೆರೇಸಾ, ಕಲ್ಪನಾ ಚಾವ್ಲಾ, ಸುನೀತಾ ವಿಲಿಯಮ್ಸ್. ಸಾನಿಯಾ ಮಿರ್ಜಾ, ಎಂ.ಎಸ್. ಸುಬ್ಬುಲಕ್ಷ್ಮಿ, ಶ್ರೀದೇವಿ ಅವರ ಚಿತ್ರಗಳು ಗಮನ ಸೆಳೆದವು. ಹಿನ್ನೆಲೆಯಲ್ಲಿ ಬಿ. ಜಯಶ್ರೀ ಕೊರಳ ಧ್ವನಿ ಪ್ರಭಾವಿಪೂರ್ಣವೆನಿಸಿತ್ತು. ಅಕ್ಕಮಹಾದೇವಿಯನ್ನು ಹೊರತು ಉಳಿದವರ ಚಿತ್ರಗಳು ಅವರ ವ್ಯಕ್ತಿತ್ವಕ್ಕೆ ಅನುಗುಣವಾಗಿದ್ದವು. ಅಕ್ಕಮಹಾದೇವಿಯ ಅನುಭಾವಿಕ ನೆಲೆಯನ್ನು ದರ್ಶಿಸುವ ಲಿಂಗದ ಕಲ್ಪನೆ ಮಾತ್ರ ಸೂಕ್ತವಾಗಿರಲಿಲ್ಲ.

ಅಕ್ಕಮಹಾದೇವಿ ಭಾರತದ ಪ್ರಥಮ ಸ್ತ್ರೀವಾದಿ ಚಿಂತಕಿ ಎನಿಸಿಕೊಂಡಿರುವುದಲ್ಲದೆ ಕ್ರಾಂತಿಕಾರಿ ಅನುಭಾವಿಕ ಪಥದರ್ಶಕಿಯಾಗಿಯೂ ಗಮನ ಸೆಳೆದಿದ್ದಾಳೆ. ಕೇಶಾಂಬರಿಯಾಗಿರುವ ಅವಳ ಭಾವಚಿತ್ರ ಸುಂದರವಾಗಿಯೇನೊ ಮೂಡಿ ಬಂದಿದೆ. ಆದರೆ ಅವಳ ಕೈಯಲ್ಲಿ ಇಷ್ಟಲಿಂಗದ ಬದಲು ಸ್ಥಾವರಲಿಂಗ ಕೊಟ್ಟು 12ನೇ ಶತಮಾನದ ತಾತ್ವಿಕ ವಿಜಯವಾಗಿದ್ದ ಬಸವಾದಿ ಶಿವಶರಣರ ಅನುಭಾವಿಕ ಅಸ್ಮಿತೆಯನ್ನೇ ತಿರುಚಿದಂತಾಗಿದೆ. ಅಕ್ಕನ ಕೈಯಲ್ಲಿ ಇಷ್ಟಲಿಂಗ ಇರಬೇಕೆ ಹೊರತು ಸ್ಥಾವರಲಿಂಗವಲ್ಲ. ಈ ಥೀಮ್ ಕೆಲಸದಲ್ಲಿ ತೊಡಗಿದವರಿಗೆ ಇಷ್ಟಲಿಂಗ ಮತ್ತು ಸ್ಥಾವರಲಿಂಗಗಳ ತಾತ್ವಿಕ ಸೂಕ್ಷ್ಮ ವ್ಯತ್ಯಾಸ ತಿಳಿಯದಿರುವುದು. ಆದರೆ, ಶಿವಶರಣರ ಕ್ರಾಂತಿಕಾರಿ ದರ್ಶನದ ಮಹತ್ವವಿರುವುದೇ ಇಷ್ಟಲಿಂಗದಲ್ಲಿ. ಚಿತ್ರದಲ್ಲಿ ತೋರಿಸಿದ್ದ ಸ್ಥಾವರಲಿಂಗವು ವೈದಿಕರ ದೇವಾಲಯಗಳ ಸಂಕೇತ. ಶೈವಾರಾಧಕರಿಗೆ ದೇವಾಲಯಗಳಲ್ಲಿ ಸ್ಥಾಪಿಸಲಾಗಿರುವ ಸ್ಥಾವರಲಿಂಗವು ಪೌರಾಣಿಕ ಶಿವ, ಪರಮಾತ್ಮನ ಸಂಕೇತ. ಪುರೋಹಿತರ ಮೂಲಕ ಪೂಜೆಗೊಳ್ಳುವ ಅದು ಅಷ್ಟವಿಧಾರ್ಚನೆ, ಷೋಡಶೋಪಚಾರಗಳಿಗೆ ಮೀಸಲಾಗಿರುವ ವೈದಿಕ ಆಚರಣಾ ಭಾಗವಾಗಿದೆ. ಎಂತಿದ್ದರೂ ಸ್ಥಾವರಲಿಂಗವು ವೈದಿಕ ಪುರೋಹಿತರ ಕಪಿಮುಷ್ಟಿಯಲ್ಲಿದ್ದು ವರ್ಣ, ಲಿಂಗ, ಜಾತಿ, ವರ್ಗ ಭೇದಗಳನ್ನು ಒಪ್ಪಿ ಅಪ್ಪಿಕೊಂಡು ಬರುತ್ತಿರುವವರ ಪರಿಕಲ್ಪನೆ.

ಇಷ್ಟಲಿಂಗವು ಕಪ್ಪನೆಯ ಶಿಲೆಯಿಂದ ತಯಾರಿಸಿದ್ದ ಗೋಳಕ ರೂಪವುಳ್ಳದಾಗಿರುತ್ತದೆ, ಸ್ಥಾವರಲಿಂಗದ ಪುಟ್ಟ ಆಕೃತಿಯ ಮೇಲೆ ಗೋಳಕದ ಹೊದಿಕೆ. ಅಂಗೈಯಲ್ಲಿ ಕ್ಲುಪ್ತವಾಗಿ ಇಟ್ಟುಕೊಳ್ಳುವ ಸಾಧನ. ಕಂತಿಯ ಒಳಗೆ ಸ್ಥಾವರಲಿಂಗ ಆಕಾರದ ವಸ್ತುವಿರುತ್ತದೆ. ಹೊದಿಕೆಯ ಮೇಲೆ ಕಪ್ಪನೆ ಕಂತಿ. ವ್ಯಕ್ತಿಯೊಬ್ಬರು ಲಿಂಗಪೂಜೆಯನ್ನು ಮಾಡಿಕೊಳ್ಳುವಾಗ ಚಕ್ಕಳಮಕ್ಕಳ ಹಾಕಿಕೊಂಡು ಎಡಗೈ ಮುಂದೆ ಮಾಡಿ ಶಿರವನ್ನು ನೇರವಾಗಿಸಿ, ಕಂಗಳೆರಡೂ ಅಂಗೈಯಲ್ಲಿರುವ ಇಷ್ಟಲಿಂಗದಲ್ಲಿ ದೃಷ್ಟಿ ನೆಟ್ಟಿರುವ ಆಕಾರದಲ್ಲಿರುತ್ತದೆ. ಇದು ಸ್ಥಾವರದ ಆರಾಧಕರಿಗೆ ಮಹಾದೇವನ ಪಿಂಡ ಅರ್ಥಾತ್ ಪೌರಾಣಿಕ ಶಿವನ ಸಂಕೇತವಾದರೆ ಲಿಂಗವಂತರಿಗೆ ತನ್ನದೆ ಸ್ವಸ್ವರೂಪವಾದ ಪಿಂಡಾಂಡದ ಸಂಕೇತ. ಈ ಪಿಂಡಾಂಡವು ಬ್ರಹ್ಮಾಂಡದೊಳಗೆ ಅಡಕವಾಗಿದೆ. ಆದ್ದರಿಂದ ಬ್ರಹ್ಮಾಂಡ ರೂಪಿ ಗೋಳಕದ ಹೊದಿಕೆ ಇರುತ್ತದೆ. ಸಕಲ ಪ್ರಾಣಿಗಳು ಬ್ರಹ್ಮಾಂಡವೆಂಬ ಕಾಸ್ಮಿಕ್‌ದೊಳಗೆ ಅಡಕವಾಗಿದ್ದೂ ತನ್ನದೇ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿವೆ. ಪಿಂಡಾಂಡ ಬ್ರಹ್ಮಾಂಡಗಳ ಸಂಯೋಜನೆಯ ಸಂಕೇತವಾಗಿರುವ ಇಷ್ಟಲಿಂಗವು ಬಸವಣ್ಣನವರು ಹೇಳುವಂತೆ

‘ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೆ

ಕೂಡಲಸಂಗಮದೇವಾ, ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ’ ಹೀಗಿದೆ ಇಷ್ಟಲಿಂಗದ ಸ್ವರೂಪ. ಅಣೋರಣಿಯಾನ ಮಹತೋ ಮಹಿಯಾನ ಆದ ಪರಾತ್ಪರ ಚೈತನ್ಯವು ಭಾವುಕರ ಭೌತ ಬದುಕಿಗೆ ಒದಗಿ ಬರಲೆಂದು ಸಾಂಕೇತಿಕವಾಗಿ ಚುಳುಕಾಗಿ ನೆಲೆ ನಿಂತಿದೆ ಎನ್ನುತ್ತಾರೆ ಬಸವಣ್ಣ. ಈವರೆಗಿನ ಧಾರ್ಮಿಕ ಲೋಕದ ದಲ್ಲಾಳಿತನವನ್ನು ತಪ್ಪಿಸಲೆಂದೆ ಹಾಗೂ ದೇವರೆಂಬ ಭಾವನಾತ್ಮಕ ಆಲಂಬನೆಯ ಹಿಂದಿನ ಸಮಾಜೋ, ಸಾಂಸ್ಕೃತಿಕ ಯಜಮಾನಿಕೆಯನ್ನು ನಿರ್ನಾಮಿಸಲೆಂದೆ ಶಿವಶರಣರು ಇಷ್ಟಲಿಂಗದ ಆವಿಷ್ಕಾರ ಮಾಡಿದ್ದರು. ಇಷ್ಟಲಿಂಗ ದೇವರಲ್ಲ. ಮೂಲದಲ್ಲಿ ದೇವನೇ ತಾನಾಗಿರುವ ಸ್ವಸ್ವರೂಪದ ಸಾಕ್ಷಾತ್ಕಾರ ಮಾಡಿಕೊಳ್ಳಲು ಇರುವ ಯೌಗಿಕ ಸಾಧನ.

ಜಾತಿ, ಮತ, ಲಿಂಗ ಯಾವುದೇ ಭೇದವಿಲ್ಲದೆ ಎಲ್ಲರಿಗೂ ಇಷ್ಟಲಿಂಗ ಕರತಲಾಮಲಕವಾಯಿತು. ಸೃಷ್ಟಿಯಲ್ಲಿ ಹುಟ್ಟಿದ ಪ್ರತಿಯೊಬ್ಬರಿಗೂ ಅಧ್ಯಾತ್ಮದ ಮೇರು ಹಂತಕ್ಕೆ ತಲುಪುವ ಸಾಮರ್ಥ್ಯವಿದೆ ಎಂಬುದನ್ನು ಇಷ್ಟಲಿಂಗದ ಉಪಾಸನೆ ತೋರಿಸಿಕೊಟ್ಟಿತು. ಭಾರತೀಯ ದಾರ್ಶನಿಕ ಲೋಕದಲ್ಲಿ ಇದೊಂದು ಕ್ರಾಂತಿಕಾರಿ ನ ಭೂತೋ ನ ಭವಿಷ್ಯತಿ ನಡೆಯಾಗಿತ್ತು. ಮೊದಲ ಬಾರಿಗೆ ತಳಸಮುದಾಯದ ಎಲ್ಲ ಕಾಯಕಜೀವಿಗಳು ಸೇರಿಕೊಂಡು ತಮ್ಮ ಶತಸಹಸ್ರಮಾನದ ಅನುಭಾವಿಕ ಅನ್ವೇಷಣೆಗಳ ಫಲವಾಗಿ ಕಂಡುಕೊಂಡಿದ್ದ ಕಾಯಕ–ದಾಸೋಹ ತತ್ವಗಳ ಅನುಷ್ಠಾನದ ಸುಭಗತೆಗಾಗಿ ಇಷ್ಟಲಿಂಗವು ಸಮರ್ಥ ಸಾಧನವಾಗಿ ಪರಿಣಮಿಸಿತ್ತು. ಇಷ್ಟಲಿಂಗ ಕೇವಲ ಆರಾಧನೆಯ ಸಾಧನ ಮಾತ್ರವಲ್ಲ, ಅದು ಸಮತೆ, ಸ್ವಾಭಿಮಾನದ ಕೈದು. ವರ್ಣ ವ್ಯವಸ್ಥೆಗೆ ಕೊಳ್ಳಿಯಿಟ್ಟ ಉಜ್ವಲ ಸೊಡರು. ಜಾತಿ, ವರ್ಗ, ವರ್ಣ, ಲಿಂಗ ಭೇದ ನೀತಿಯನ್ನು ಬುಡಮೇಲು ಮಾಡಿದ ಉತ್ಪಾತವಾಗಿತ್ತು. ಹೀಗಾಗಿ ಇಷ್ಟಲಿಂಗದ ಸ್ವರೂಪ ಮತ್ತು ಅದರ ತಾತ್ವಿಕತೆಗೆ ಸಾವಯವ ಸಂಬಂಧವಿದೆ. ಅವಿನಾಭಾವ ದೀಪ್ತಿಯಿದೆ. ಅದನ್ನು ಅರಿಯದೆ ಹೋದರೆ 12ನೇ ಶತಮಾನದ ಶರಣ ಕ್ರಾಂತಿಯ ಜೀವದ್ವನಿಯನ್ನೆ ನಗಣ್ಯಗೊಳಿಸಿದಂತಾಗುತ್ತದೆ. ಇಷ್ಟಲಿಂಗವು ಸ್ಥಾವರಲಿಂಗದ ಅಪಸವ್ಯಗಳನ್ನು ಉಚ್ಚಾಟಿಸಲೆಂದೇ ಹುಟ್ಟಿಕೊಂಡಿದೆ ಎಂಬ ತಾತ್ವಿಕ ಎಚ್ಚರವಿರಬೇಕಾಗುತ್ತದೆ.

ಮಾನವ ಜನಾಂಗದ ದೀರ್ಘಕಾಲೀನ ನಡೆಗಳಲ್ಲಿ ಕಾಲಕಾಲಕ್ಕೂ ಸಂಭವಿಸಿದ ಕ್ರಾಂತಿಯಲ್ಲಿ ಮೂಡಿದ ಮಹೋನ್ನತಿಯ ಮೇರು ಕಾಣ್ಕೆಗಳನ್ನು ಅವುಗಳ ಸಂಕೇತಗಳನ್ನು ಮೂರ್ತಗೊಳಿಸುವಾಗ ಮೈ ತುಂಬಾ ಕಣ್ಣಾಗಿಸಿಕೊಂಡು ಅತಿ ಎಚ್ಚರದಲ್ಲಿ ಕೆಲಸ ಮಾಡಬೇಕಾಗುತ್ತದೆ. ಇಲ್ಲವಾದರೆ ಸಮಬಾಳಿಗಾಗಿ ನಮ್ಮ ದಾರ್ಶನಿಕರು ಇಟ್ಟ ಹೆಜ್ಜೆಗಳ ಜಾಡನ್ನು ತಪ್ಪಿಸಿದಂತಾದೀತು. ಮುಂದಿನ ದಿನಗಳಲ್ಲಾದರೂ ಇತಿಹಾಸವನ್ನು ಪುನರುತ್ಥಾನಗೊಳಿಸುವ ಕ್ರಮದಲ್ಲಿ ವಿಚಕ್ಷಣ ವಿಕ್ರಾಂತ ಸಮದೃಷ್ಟಿ ಸಮನಿಸಲಿ ಎಂದು ಆಶಿಸೋಣವೆ. ಶರಣ ಸಂದೋಹದಲ್ಲಿನ ಮೇರು ವ್ಯಕ್ತಿತ್ವದ ಮಹಾದೇವಿಯಕ್ಕನ ಕೈಯಲ್ಲಿ ಇರಬೇಕಾದುದು ಇಷ್ಟಲಿಂಗವೆ ಹೊರತು ಸ್ಥಾವರಲಿಂಗವಲ್ಲ.

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ಪ್ರೇಮ ಐಶ್ವರ್ಯದೊಂದಿಗೆ ಸಾಯುತ್ತದೆ.

  —ಹಾರ್ವೆ

- ಮಾನವ ಜನಾಂಗವನ್ನು ಬಂಧುಗಳೆಂದು ನೋಡಬೇಕು.

  —ಕುರಾನ್

- ಹಸಿದವರಿಗೆ ನಮ್ಮಿಂದ ಊಟ ಹಾಕಲು ಆಗದಿದ್ದಾಗ, ಊಟ ಹಾಕುವವರ ಮನೆಯನ್ನಾದರೂ ತೋರಿಸಬೇಕು.

  —ಗಳಗನಾಥ

- ಜೀವನವೆಂಬುದು ಕಠಿಣ ಸತ್ಯ. ಧೈರ್ಯವಾಗಿ ಅದನ್ನು ಎದುರಿಸಿ. ನಿಮ್ಮ ಮಾರ್ಗದಲ್ಲಿ ಮುಂದುವರೆಯಿರಿ. ಅದು ಅಭೇದ್ಯವಾಗಿರಬಹುದು. ಆದರೆ ಆತ್ಮ ಅದಕ್ಕಿಂತ ಬಲಯುತವಾದುದು.

  —ಸ್ವಾಮಿ ವಿವೇಕಾನಂದ

- ದೇವರನ್ನು ಪೂಜಿಸಿದರೆ ದೇವರಾಗುತ್ತೇವೆ, ದೆವ್ವಗಳನ್ನು ಪೂಜಿಸಿದರೆ ದೆವ್ವಗಳಾಗುತ್ತೇವೆ.

  —ಕುವೆಂಪು